

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **27–01–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ಸಹಾಬಿಯರ ಕುರಿತು ಸ್ವಲ್ಪ ಪ್ರಸ್ತಾಪಿಸುವೆನು. ಮೊದಲ ಪ್ರಸ್ತಾಪ ಹಝ್ರತ್ ಅಬೂಲುಬಾಬ ಬಿನ್ ಅಬ್ದುಲ್ ಮುಂಧಿರ್(ರ)ರದ್ದು ಆಗಿದೆ. ಅವರ ಕುರಿತು ಇನ್ನಷ್ಟು ಕೆಲವು ವರದಿಗಳು ಲಭಿಸಿವೆ. ಅಲ್ಲಾಮ ಇಬ್ನು ಅಬ್ದುಲ್‌ಬರ್ರ್ ತನ್ನ ಗ್ರಂಥವಾದ ಅಲ್‌ಇಸ್ತಿಆಬ್‌ನಲ್ಲಿ ಬರೆಯುತ್ತಾರೆ:

**ವ ಆಖರೂನಅ್‌ತರಫೂ ಬಿಧುನೂಬಿಹಿಂ ಖಲತೂ ಅಮಲನ್ ಸಾಲಿಹನ್ ವಆಖರ ಸಯ್ಯಿಅ** (ತಮ್ಮ ತಪ್ಪನ್ನು ಒಪ್ಪಿಕೊಂಡ ಇನ್ನು ಕೆಲವರು ಸಹ ಇದ್ದಾರೆ. ಅವರು ಸತ್ಕೃತ್ಯಗಳೊಂದಿಗೆ ಕೆಲವು ದುಷ್ಕೃತ್ಯಗಳನ್ನು ಬೆರೆಸಿರುವರು.) ಎಂಬ ಪವಿತ್ರ ಖುರ್‌ಆನಿನ ವಚನದ ಬಗ್ಗೆ ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್(ರ) ಹೇಳುತ್ತಾರೆ: ಈ ವಚನದಲ್ಲಿ ತಬೂಕ್ ಯುದ್ಧದಿಂದ ಹಿಂದುಳಿದಿದ್ದ ಅಬೂಲುಬಾಬ(ರ) ಮತ್ತು ಇತರ ಏಳೆಂಟು ವ್ಯಕ್ತಿಗಳ ಕುರಿತು ಪ್ರಸ್ತಾಪಿಸಲಾಗಿದೆ. ಅನಂತರ ಅವರು ಅಲ್ಲಾಹನ ಸನ್ನಿಧಿಯಲ್ಲಿ ಪಶ್ಚಾತ್ತಾಪ ಮಾಡಿದರು ಮತ್ತು ಸ್ವತಃ ತಮ್ಮನ್ನು ಕಂಬದೊಂದಿಗೆ ಕಟ್ಟಿಕೊಂಡರು. ಅವರ ಉತ್ತಮ ಕೃತ್ಯ ಪಶ್ಚಾತ್ತಾಪವಾಗಿತ್ತು ಮತ್ತು ಕೆಟ್ಟ ಕೃತ್ಯ ಜಿಹಾದಿನಿಂದ ಹಿಂದೆ ಉಳಿದದ್ದು ಆಗಿತ್ತು.

ಮಜ್‌ಮಅ್ ಬಿನ್ ಜಾರಿಯ ವರದಿ ಮಾಡುತ್ತಾರೆ: ಹಝ್ರತ್ ಅನೀಸ್ ಬಿನ್ ಖತಾದ(ರ) ಶಹೀದ್ ಆದ ನಂತರ ಅವರ ಪತ್ನಿಯಾದ ಹಝ್ರತ್ ಖನ್‌ಸಾ ಬಿನ್ತ್ ಖುದ್ದಾಮ್‌ರ ವಿವಾಹವನ್ನು ಅವರ ತಂದೆ ಮುಝೀನ ಗೋತ್ರದ ಒಬ್ಬ ವ್ಯಕ್ತಿಯೊಂದಿಗೆ ನಡೆಸಿದರು. ಅದು ಅವರಿಗೆ ಇಷ್ಟವಿರಲಿಲ್ಲ. ಆಗ ಹಝ್ರತ್ ಪೈಗಂಬರ್(ಸ) ಅವರ ನಿಕಾಹನ್ನು ಫಸ್‌ಖ್ (ರದ್ದು) ಮಾಡಿದರು. ಅನಂತರ ಅವರನ್ನು ಹಝ್ರತ್ ಅಬೂಲುಬಾಬ(ರ) ವಿವಾಹ ಮಾಡಿಕೊಂಡರು. ಅವರಿಂದ ಹಝ್ರತ್ ಸಾಇಬ್ ಬಿನ್ ಅಬೂಲುಬಾಬ ಜನಿಸಿದರು. ಅಬ್ದುಲ್ಲಾಹ್ ಬಿನ್ ಅಬೀ ಯಝೀದ್ ಹೇಳುತ್ತಾರೆ: ನಾವು ಹಝ್ರತ್ ಅಬೂಲುಬಾಬ(ರ)ರ ಜೊತೆಗೆ ಅವರ ಮನೆಗೆ ಹೋದೆವು. ಅಲ್ಲಿ ಹರಿದ ಅಂಗಿಯನ್ನು ಧರಿಸಿದ ಒಬ್ಬ ವ್ಯಕ್ತಿ ಕುಳಿತುಕೊಂಡಿದ್ದರು. ಹಝ್ರತ್ ಪೈಗಂಬರ್(ಸ)ರಿಂದ ಹೀಗೆ ಆಲಿಸಿದ್ದಾಗಿ ಅವರು ಹೇಳಿದರು: ಯಾವನು ಪವಿತ್ರ ಖುರ್‌ಆನನ್ನು ಇಂಪಾದ ಸ್ವರದಲ್ಲಿ ಪಾರಾಯಣ ಮಾಡುವುದಿಲ್ಲವೋ ಅವನು ನಮ್ಮವನಲ್ಲ.

ಮುಂದಿನ ಪ್ರಸ್ತಾಪ ಹಝ್ರತ್ ಅಬುಝ್ಝಿಯಾಹ್ ಬಿನ್ ಸಾಬಿತ್ ಬಿನ್ ನೂಮಾನ್(ರ)ರದ್ದು ಆಗಿದೆ. ಒಂದು ವರದಿಯ ಪ್ರಕಾರ ಬದ್ರ್ ಯುದ್ಧದಲ್ಲಿ ಅವರ ಮೊಣಕಾಲಿಗೆ ಕಲ್ಲಿನ ಚೂಪಾದ ಭಾಗದಿಂದ ಗಾಯವಾದ ಕಾರಣದಿಂದ ಅವರಿಗೆ ಮರಳಬೇಕಾಗಿ ಬಂದಿತ್ತು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಯುದ್ಧ ಸಂಪತ್ತಿನಿಂದ ಒಂದು ಪಾಲನ್ನು ಅವರಿಗಾಗಿ ಇರಿಸಿದರು.

ಮುಂದಿನದ್ದು ಹಝ್ರತ್ ಪೈಗಂಬರ್(ಸ)ರ ಗುಲಾಮರಾದ ಹಝ್ರತ್ ಅನ್ಸ(ರ)ರ ಪ್ರಸ್ತಾಪವಾಗಿದೆ. ಇಮಾಂ ಝೊಹ್‌ರಿ ಹೇಳುತ್ತಾರೆ: ಮಧ್ಯಾಹ್ನದ ನಂತರ ಭೇಟಿಯಾಗುವವರಿಗೆ ಹಝ್ರತ್ ಪೈಗಂಬರ್(ಸ) ಭೇಟಿಯ ಅನುಮತಿ ಕೊಡುತ್ತಿದ್ದರು. ಈ ಅನುಮತಿಯನ್ನು ಹಝ್ರತ್ ಪೈಗಂಬರ್(ಸ)ರಿಂದ ಹಝ್ರತ್ ಅನ್ಸ(ರ) ಪಡೆಯುತ್ತಿದ್ದರು.

ಮುಂದಿನದ್ದು ಹಝ್ರತ್ ಮರ್‌ಸದ್ ಬಿನ್ ಅಬೀ ಮರ್‌ಸದ್(ರ)ರದ್ದು ಆಗಿದೆ. ಇಮ್ರಾನ್ ಬಿನ್ ಮನ್ನಾಹ್ ಹೇಳುತ್ತಾರೆ: ಅಬೂಮರ್‌ಸದ್(ರ) ಮತ್ತು ಅವರ ಪುತ್ರರಾದ ಮರ್‌ಸದ್ ಬಿನ್ ಅಬೀ ಮರ್‌ಸದ್(ರ) ಮದೀನದ ಕಡೆಗೆ ವಲಸೆ ಹೋದಾಗ ಅವರಿಬ್ಬರೂ ಹಝ್ರತ್ ಕುಲ್ಸೂಮ್ ಬಿನ್ ಹಿದಮ್(ರ)ರ ಬಳಿಯಲ್ಲಿ ತಂಗಿದ್ದರು. ಮುಹಮ್ಮದ್ ಬಿನ್ ಉಮರ್ ಹೇಳುತ್ತಾರೆ: ಅವರು ಉಹದ್ ಯುದ್ಧದಲ್ಲೂ ಭಾಗಿಯಾಗಿದ್ದರು.

ಮುಂದಿನ ಪ್ರಸ್ತಾಪ ಹಝ್ರತ್ ಅಬೂಮರ್‌ಸದ್ ಕನ್ನಾಝ್ ಬಿನ್ ಅಲ್‌ಹುಸೈನ್ ಅಲ್‌ಗನ್‌ವಿ(ರ)ರದ್ದು ಆಗಿದೆ. ಹಿಜರೀ 2, ರಬೀಉಲ್ ಅವ್ವಲ್‌ನಲ್ಲಿ ಹಝ್ರತ್ ಪೈಗಂಬರ್(ಸ) 30 ಒಂಟೆ ಸವಾರರಾದ ಮುಹಾಜಿರರ ಒಂದು ಸೈನ್ಯವನ್ನು ತನ್ನ ದೊಡ್ಡಪ್ಪ ಹಝ್ರತ್ ಹಂಝ ಬಿನ್ ಅಬ್ದುಲ್ ಮುತಲ್ಲಿಬ್(ರ)ರ ನೇತೃತ್ವದಲ್ಲಿ ಮದೀನದ ಪೂರ್ವದಲ್ಲಿರುವ ಸೈಫುಲ್ ಬಹ್‌ರಿನ ಕಡೆಗೆ ಕಳುಹಿಸಿದರು. ಅಲ್ಲಿ ಮಕ್ಕದ ಮಹಾನ್ ನಾಯಕ ಅಬೂಜಹಲ್ ಮತ್ತು ಅವನ ಮುನ್ನೂರು ಸವಾರರ ಸೈನ್ಯದೊಂದಿಗೆ ಮುಖಾಮುಖಿಯಾಯಿತು. ಎರಡೂ ಪಕ್ಷಗಳ ಸೈನ್ಯಗಳು ಯುದ್ಧಕ್ಕಾಗಿ ಸಾಲಾಗಿ ನಿಂತರು. ಅಷ್ಟರಲ್ಲಿ ಆ ಪ್ರದೇಶದ ಸರದಾರ ಮಜ್‌ದಿ ಬಿನ್ ಅಮ್ರ್ ಅಲ್‌ಜಹ್‌ನಿ ಇರುಪಕ್ಷಗಳ ನಡುವೆ ಮಾತುಕತೆ ನಡೆಸಿ ಯುದ್ಧ ನಡೆಯುವುದನ್ನು ತಡೆದರು. ಈ ಕಾರ್ಯಾಚರಣೆ **ಸರಿಯ ಹಮ್‌ಝ ಬಿನ್ ಅಬ್ದುಲ್ ಮುತಲ್ಲಿಬ್** ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಹಝ್ರತ್ ಅಬೂ ಮರ್‌ಸದ್(ರ) ಸಹ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಹಝ್ರತ್ ಪೈಗಂಬರ್(ಸ) ಮೊತ್ತಮೊದಲ ಧ್ವಜವನ್ನು ಹಝ್ರತ್ ಹಂಝ(ರ)ರಿಗೆ ಕೊಟ್ಟಿದ್ದರು ಎಂದು ವರದಿಗಳಲ್ಲಿ ಬಂದಿವೆ. ಈ ಕಾರ್ಯಾಚರಣೆಯಲ್ಲಿ ಹಝ್ರತ್ ಹಂಝ(ರ)ರ ಧ್ವಜವನ್ನು ಹಝ್ರತ್ ಅಬೂ ಮರ್‌ಸದ್(ರ) ಎತ್ತಿಕೊಂಡಿದ್ದರು. ಹಝ್ರತ್ ಅಬೂ ಮರ್‌ಸದ್ ಕನ್ನಾಝ್(ರ) ಮತ್ತು ಹಝ್ರತ್ ಹಮ್‌ಝ(ರ)

ಸಮಪ್ರಾಯದವರೂ ಸ್ನೇಹಿತರೂ ಆಗಿದ್ದರು. ಹಝ್ರತ್ ಅಬೂಮರ್‌ಸದ್(ರ) ಮತ್ತು ಅವರ ಪುತ್ರನಾದ ಮರ್‌ಸದ್(ರ) ಇಬ್ಬರಿಗೂ ಬದ್ರ್ ಯುದ್ಧದಲ್ಲಿ ಪಾಲ್ಗೊಳ್ಳಲು ಸೌಭಾಗ್ಯ ಲಭಿಸಿತ್ತು.

ಮುಂದಿನ ಪ್ರಸ್ತಾಪ ಹಝ್ರತ್ ಸಲೀತ್ ಬಿನ್ ಖೈಸ್ ಬಿನ್ ಅಮ್ರ್(ರ)ರದ್ದು ಆಗಿದೆ. ಹಝ್ರತ್ ಸಲೀತ್ ಬಿನ್ ಖೈಸ್ ಬಿನ್ ಅಮ್ರ್(ರ)ರ ಸಂಬಂಧ ಅನ್ಸಾರ್ ಗೋತ್ರವಾದ ಖಝ್ರಜಿನ ಶಾಖೆಯಾದ ಬನೂ ಅದ್ದಿ ಬಿನ್ ನಜ್ಜಾರ್‌ನೊಂದಿಗೆ ಆಗಿತ್ತು. ಮಕ್ಕಾ ವಿಜಯದ ಸಮಯದಲ್ಲಿ ಮತ್ತು ಹುನೈನ್ ಯುದ್ಧದ ಸಂದರ್ಭದಲ್ಲಿ ಅನ್ಸಾರಿನ ಗೋತ್ರವಾದ ಬನೂ ಮಾಝುನಿನ ಧ್ವಜ ಹಝ್ರತ್ ಸಲೀತ್ ಬಿನ್ ಖೈಸ್(ರ)ರ ಬಳಿಯಲ್ಲಿತ್ತು. ಹಿಜರೀ 13 ಅಥವಾ 14ರ ಆರಂಭದಲ್ಲಿ ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಮುಸ್ಲಿಮರ ಮತ್ತು ಇರಾನಿಯರ ನಡುವೆ ಜಿಸರ್ ಯುದ್ಧ ನಡೆಯಿತು. ಈ ಯುದ್ಧದಲ್ಲಿ 2 ಸಾವಿರ ಇರಾನಿಯರು ಕೊಲ್ಲಲ್ಪಟ್ಟರು. ಕೆಲವು ವರದಿಗಳ ಪ್ರಕಾರ 6 ಸಾವಿರ ಇರಾನಿಯರು ವಧಿಸಲ್ಪಟ್ಟರು. ಅದೇ ರೀತಿಯಲ್ಲಿ ಕೆಲವರ ಪ್ರಕಾರ 1,800 ಅಥವಾ 4,000 ಮುಸ್ಲಿಮರು ಶಹೀದ್ ಆದರು. ಆ ಹುತಾತ್ಮರಲ್ಲಿ ಹಝ್ರತ್ ಸಲೀತ್ ಬಿನ್ ಖೈಸ್(ರ) ಸಹ ಇದ್ದರು.

ಮುಂದಿನ ಪ್ರಸ್ತಾಪ ಹಝ್ರತ್ ಮಜ್‌ಧರ್ ಬಿನ್ ಝಿಯಾದ್(ರ)ರದ್ದು ಆಗಿದೆ. ಹಝ್ರತ್ ಮಜ್‌ಧರ್ ಬಿನ್ ಝಿಯಾದ್(ರ) ಇಸ್ಲಾಮಿನ ಆರ್ವಿಭಾವಕ್ಕೆ ಮುಂಚೆ ಸುವೈದ್ ಬಿನ್ ಸಾಮಿತ್‌ರನ್ನು ವಧಿಸಿದ್ದರು. ನಂತರ ಕಾಲದಲ್ಲಿ ಹಝ್ರತ್ ಮಜ್‌ಧರ್(ರ) ಮತ್ತು ಸುವೈದ್ ಬಿನ್ ಸಾಮಿತಿನ ಪುತ್ರನಾದ ಹಾರಿಸ್ ಇಸ್ಲಾಂ ಸ್ವೀಕಾರ ಮಾಡಿಕೊಂಡರು. ಆದರೆ ಹಾರಿಸ್ ಬಿನ್ ಸುವೈದ್ ತನ್ನ ತಂದೆಯ ಕೊಲೆಯ ಸೇಡು ತೀರಿಸಲಿಕ್ಕಾಗಿ ಸಂದರ್ಭವನ್ನು ಹುಡುಕುತ್ತಿದ್ದರು. ಉಹದ್ ಯುದ್ಧದಲ್ಲಿ ಖುರೈಶಿಯರು ಮರಳಿ ಬಂದು ಮುಸ್ಲಿಮರ ಮೇಲೆ ದಾಳಿ ನಡೆಸಿದಾಗ ಹಾರಿಸ್ ಬಿನ್ ಸುವೈದ್ ಹಿಂದಿನಿಂದ ಹಝ್ರತ್ ಮಜ್‌ಧರ್(ರ)ರ ಕುತ್ತಿಗೆಯ ಮೇಲೆ ಹಲ್ಲೆ ನಡೆಸಿ ಅವರನ್ನು ಶಹೀದ್ ಮಾಡಿದರು. ಹಾರಿಸ್ ಬಿನ್ ಸುವೈದ್ ಮೋಸದಿಂದ ಹಝ್ರತ್ ಮಜ್‌ಧರ್(ರ)ರನ್ನು ವಧಿಸಿರುವನೆಂದೂ ಆದುದರಿಂದ ಹಾರಿಸ್‌ನನ್ನು ಹಝ್ರತ್ ಮಜ್‌ಧರ್(ರ)ರ ಕೊಲೆಗೆ ಪ್ರತೀಕಾರವಾಗಿ ವಧಿಸಬೇಕೆಂದೂ ಹಝ್ರತ್ ಜಿಬ್ರೀಲ್(ಅ) ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಿದರು. ಹೀಗೆ ಹಝ್ರತ್ ಪೈಗಂಬರ್(ಸ)ರ ನಿರ್ದೇಶನ ಪ್ರಕಾರ ಹಝ್ರತ್ ಉವೈಮ್ ಬಿನ್ ಸಾಯಿದ(ರ) ಖುಬಾ ಮಸೀದಿಯ ಬಾಗಿಲ ಬಳಿ ಹಾರಿಸ್ ಬಿನ್ ಸುವೈದ್‌ರನ್ನು ವಧಿಸಿದರು.

ಮುಂದಿನದ್ದು ಹಝ್ರತ್ ರಫಾ ಬಿನ್ ರಾಫೀ ಬಿನ್ ಮಾಲಿಕ್ ಬಿನ್ ಅಜ್‌ಲಾನ್(ರ)ರ ಪ್ರಸ್ತಾಪವಾಗಿದೆ. ರಫಾ ಬಿನ್ ರಾಫೀ ಬಿನ್ ಮಾಲಿಕ್ ಬಿನ್ ಅಜ್‌ಲಾನ್(ರ) ತನ್ನ ಚಿಕ್ಕಮ್ಮನ ಪುತ್ರನಾದ ಮುಆಧ್ ಬಿನ್ ಅಫ್ರಾ(ರ)ರ ಜೊತೆಗೆ ಮಕ್ಕಕ್ಕೆ ತಲುಪಿ ಸನಿಯ ಪರ್ವತದಿಂದ ಕೆಳಗೆ ಇಳಿದಾಗ ಒಬ್ಬ ವ್ಯಕ್ತಿಯನ್ನು ಕಂಡರು. ಅವರು ಹಝ್ರತ್ ಪೈಗಂಬರ್(ಸ) ಆಗಿದ್ದರು. ಅವರಿಗೆ ಹಝ್ರತ್ ಪೈಗಂಬರ್(ಸ)ರ ಪರಿಚಯವಿರಲಿಲ್ಲ. ಪ್ರವಾದಿತ್ವ ವಾದವನ್ನು ಮಾಡುವ ವ್ಯಕ್ತಿ ಎಲ್ಲಿ ಎಂದು ಅವರು ಹಝ್ರತ್ ಪೈಗಂಬರ್(ಸ)ರೊಡನೆ ಕೇಳಿದರು. ಅದು ನಾನೇ ಆಗಿರುವೆನು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಅವರು ಕೇಳಿದಾಗ ಹಝ್ರತ್ ಪೈಗಂಬರ್(ಸ) ಅವರಿಗೆ ಇಸ್ಲಾಮಿನ ಬಗ್ಗೆ ಹೇಳಿಕೊಟ್ಟರು. ಹಝ್ರತ್ ರಫಾ ಕಅ್‌ಬ ಭವನದ ತವಾಫಿಗಾಗಿ ಹೊರಟು ಹೋದರು ಮತ್ತು ದುಆ ಮಾಡಿದರು. ಅನಂತರ ಅವರು ಕಲಿಮ ಉಚ್ಚರಿಸಿಕೊಂಡು ಇಸ್ಲಾಂ ಸ್ವೀಕಾರ ಮಾಡಿಕೊಂಡರು.

ಹಝ್ರತ್ ರಫಾಅ(ರ) ಹೇಳುತ್ತಾರೆ: ಒಂದು ದಿನ ನಾವು ಹಝ್ರತ್ ಪೈಗಂಬರ್(ಸ)ರ ಜೊತೆಗೆ ಮಸೀದಿಯಲ್ಲಿ ಕುಳಿತುಕೊಂಡಿದ್ದೆವು. ಒಬ್ಬ ಗ್ರಾಮೀಣ ವ್ಯಕ್ತಿ ನಮಾಝ್ ನಿರ್ವಹಿಸಿದ ನಂತರ ಹಝ್ರತ್ ಪೈಗಂಬರ್(ಸ)ರಿಗೆ ಸಲಾಂ ಹೇಳಿದರು. ಅವರು ಸಲಾಮಿಗೆ ಉತ್ತರಿಸಿದರು ಮತ್ತು ಪುನಃ ನಮಾಝ್ ನಿರ್ವಹಿಸಲು ಆ ವ್ಯಕ್ತಿಯೊಡನೆ ಹೇಳಿದರು. ಆತ ಪುನಃ ನಮಾಝ್ ನಿರ್ವಹಿಸಿದ ನಂತರ ಮರಳಿ ಬಂದು ಸಲಾಂ ಹೇಳಿದನು. ಪುನಃ ನಮಾಝ್ ನಿರ್ವಹಿಸಲು ಆತನೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು. ಹೀಗೆ ಎರಡು ಮೂರು ಬಾರಿ ನಡೆಯಿತು. ಕೊನೆಗೆ ಆತನು ನನಗೆ ನಮಾಝ್ ಕಲಿಸಿರಿ ಎಂದು ಹೇಳಿದನು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ನಮಾಝ್ ನಿರ್ವಹಿಸುವ ಇರಾದೆ ಮಾಡಿದರೆ ಮೊದಲು ಅಲ್ಲಾಹನ ಆದೇಶ ಪ್ರಕಾರ ವುಝೂ ಮಾಡು. ಅನಂತರ ನಮಾಝಿನಲ್ಲಿ ಪವಿತ್ರ ಖುರ್‌ಆನಿನ ವಚನಗಳು ಕಂಠಪಾಠವಿದ್ದರೆ ಅದನ್ನು ಪಠಿಸು. ಅನಂತರ ನಿಧಾನವಾಗಿ ರುಕೂಅ್ ಮಾಡು. ಅನಂತರ ನೇರವಾಗಿ ನಿಲ್ಲು. ಅನಂತರ ಸರಿಯಾದ ರೀತಿಯಲ್ಲಿ ಸಜ್‌ದ ಮಾಡು. ಅನಂತರ ಸಮಾಧಾನದಿಂದ ಕುಳಿತುಕೊ. ಪುನಃ ಸಜ್‌ದ ಮಾಡಿ ಎದ್ದೇಳು. ನೀನು ಹೀಗೆ ಮಾಡಿದರೆ ನಿನ್ನ ನಮಾಝ್ ಪೂರ್ತಿಯಾಯಿತು. ಇದರಲ್ಲಿ ಏನಾದರೂ ಕಮ್ಮಿ ಮಾಡಿದರೆ ನಿನ್ನ ನಮಾಝಿನಲ್ಲಿ ಅಷ್ಟೇ ಕಡಿಮೆಗೊಳಿಸಿದ್ದೀ ಎಂದು ತಿಳಿದುಕೋ.

ಮುಂದಿನದ್ದು ಹಝ್ರತ್ ಉಸೈದ್ ಬಿನ್ ಮಾಲಿಕ್ ಬಿನ್ ರಬೀಅ(ರ)ರ ಪ್ರಸ್ತಾಪವಾಗಿದೆ. ಇಬ್ನು ಇಸ್‌ಹಾಖ್ ಹೇಳುತ್ತಾರೆ: ಹಝ್ರತ್ ಉಸೈದ್ ಬಿನ್ ಮಾಲಿಕ್ ಬಿನ್ ರಬೀಅ(ರ) ಬದ್ರ್ ಯುದ್ಧದಲ್ಲಿ ಭಾಗಿಯಾಗಿದ್ದರು. ಅವರ ಇಳಿವಯಸ್ಸಿನಲ್ಲಿ ಅವರಿಗೆ ದೃಷ್ಟಿ ಶಕ್ತಿ ಇಲ್ಲವಾದಾಗ ಅವರು ಹೇಳಿದರು: ನಾನಿಂದು ಬದ್ರ್ ಮೈದಾನದಲ್ಲಿ ಇರುತ್ತಿದ್ದರೆ ಮತ್ತು ನನ್ನ ದೃಷ್ಟಿ ಸರಿಯಿರುತ್ತಿದ್ದರೆ ನಾನು ನಿಮಗೆ ದೇವದೂತರು ಇಳಿದ ಆ ಕಣಿವೆಯನ್ನು ತೋರಿಸುತ್ತಿದ್ದೆ. ಅದರಲ್ಲಿ ನನಗೆ ಯಾವುದೇ ಸಂಶಯವಿಲ್ಲ. ಹಝ್ರತ್ ಅಬೂ ಉಸೈದ್ ಬಿನ್ ಮಾಲಿಕ್ ಬಿನ್ ರಬೀಅ(ರ) ಹೇಳುತ್ತಾರೆ: ನಾವು ಹಝ್ರತ್ ಪೈಗಂಬರ್(ಸ)ರ ಸಮೀಪದಲ್ಲಿ ಕುಳಿತುಕೊಂಡಿದ್ದೆವು. ಬನೂ ಸಲ್ಮಾದ ಒಬ್ಬ ವ್ಯಕ್ತಿ ಬಂದು ಕೇಳಿದರು: ತಂದೆತಾಯಂದಿರು ಮೃತಪಟ್ಟ ನಂತರವೂ ಅವರೊಂದಿಗೆ ಉತ್ತಮವಾಗಿ ವರ್ತಿಸುವುದು ಅವಶ್ಯವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಅವರಿಗಾಗಿ ದುಆ ಮಾಡಿರಿ, ಅವರಿಗಾಗಿ ಇಸ್ತಿಗ್‌ಫಾರ್ ಮಾಡಿರಿ, ಅವರ ವಾಗ್ದಾನಗಳನ್ನು ಈಡೇರಿಸಿರಿ, ಅವರ ಸಂಬಂಧಿಕರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರಿ, ಅವರ ಸ್ನೇಹಿತರನ್ನು ಗೌರವಿಸಿರಿ.

ಈ ರೀತಿಯಾಗಿ ಅವರಿಗೂ ಪ್ರತಿಫಲ ಲಭಿಸುತ್ತಾ ಇರುವುದು ಮತ್ತು ಅವರ ಪಾಪಗಳನ್ನು ಕ್ಷಮಿಸಲಾಗುವುದು.

ಮುಂದಿನದ್ದು ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ದುಲ್ ಅಸದ್(ರ)ರ ಪ್ರಸ್ತಾಪವಾಗಿದೆ. ಹಝ್ರತ್ ಪೈಗಂಬರ್(ಸ) ಒಂದು ಧ್ವಜವನ್ನು ಅವರಿಗೆ ಕೊಟ್ಟು ಬನೂ ಅಸದ್ ಗೋತ್ರವನ್ನು ದಮನಿಸಲು 150 ಮುಹಾಜಿರರು ಮತ್ತು ಅನ್ಸಾರರಿಗೆ ಸೇನಾಧಿಪತಿಯನ್ನಾಗಿ ಮಾಡಿಕೊಂಡು ಕಳುಹಿಸಿದರು. ಅವರು ಉಹದ್ ಮತ್ತು ಬದ್ರ್ ಯುದ್ಧದಲ್ಲಿ ಭಾಗವಹಿಸಿದ್ದರು. ಉಹದ್ ಯುದ್ಧದಲ್ಲಿ ಅವರ ತೋಳಿಗೆ ಗಾಯವಾದ ಕಾರಣದಿಂದ ಹಿಜರೀ 4, ಜಮಾದಿಲ್ ಆಖಿರ್ 3ರಂದು ಅವರು ನಿಧನರಾದರು.

ಮುಂದಿನದ್ದು ಹಝ್ರತ್ ಖ಼ಲಾದ್ ಬಿನ್ ರಾಫೀ ಅಝ್ಝುರ್‌ಖಿ(ರ)ರ ಪ್ರಸ್ತಾಪವಾಗಿದೆ. ಹಝ್ರತ್ ಖ಼ಲಾದ್ ಬಿನ್ ರಾಫೀ ಅಝ್ಝುರ್‌ಖಿ(ರ)ರ ಸಂಬಂಧ ಅನ್ಸಾರಿನ ಗೋತ್ರವಾದ ಬನೂ ಖಝ್ರಜಿನ ಶಾಖೆಯಾದ ಅಜ್‌ಲಾನ್‌ನೊಂದಿಗೆ ಆಗಿತ್ತು. ಹಝ್ರತ್ ಪೈಗಂಬರ್(ಸ) ಎರಡು ಮೂರು ಬಾರಿ ನಮಾಝ್ ಪುನಃ ನಿರ್ವಹಿಸಲು ಹೇಳಿದ್ದು ಮತ್ತು ಅವರ ಬೇಡಿಕೆ ಪ್ರಕಾರ ನಮಾಝನ್ನು ಕಲಿಸಿದ್ದು ಹಝ್ರತ್ ಖ಼ಲಾದ್ ಬಿನ್ ರಾಫೀ(ರ)ರಿಗೆ ಆಗಿತ್ತು.

ಮುಂದಿನದ್ದು ಹಝ್ರತ್ ಉಬಾದ್ ಬಿನ್ ಬಶರ್(ರ)ರ ಪ್ರಸ್ತಾಪವಾಗಿದೆ. ಖ಼ಂದಕ್ ಯುದ್ಧದ ಸಮಯದಲ್ಲಿ ಅವರಿಗೆ ಉತ್ತಮವಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರ ಆದೇಶ ಪ್ರಕಾರ ಅಬೂಸುಫ್‌ಯಾನ್ ಮತ್ತು ಅವರ ಜೊತೆಗಿದ್ದ ಕೆಲವು ಮುಶ್ರಿಕರನ್ನು ಹಝ್ರತ್ ಉಬಾದ್ ಬಿನ್ ಬಶರ್(ರ) ಎದುರಿಸಿದರು ಮತ್ತು ಅವರನ್ನು ಮರಳಿ ಹೋಗುವಂತೆ ಮಾಡಿದರು. ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರ ಡೇರೆಯ ಸಂರಕ್ಷಣೆ ಮಾಡಲು ಸಹ ಹಝ್ರತ್ ಉಬಾದ್ ಬಿನ್ ಬಶರ್(ರ)ರಿಗೆ ಸೌಭಾಗ್ಯ ಲಭಿಸಿತ್ತು. ಹಝ್ರತ್ ಉಮ್ಮೇ ಸಲ್ಮಾ(ರ) ವರದಿ ಮಾಡುತ್ತಾರೆ: ಅಲ್ಲಾಹನು ಹಝ್ರತ್ ಉಬಾದ್ ಬಿನ್ ಬಶರ್(ರ)ರ ಮೇಲೆ ಕೃಪೆದೋರಲಿ. ಸಹಾಬಿಯರಲ್ಲಿ ಅತ್ಯಂತ ಹೆಚ್ಚಾಗಿ ಅವರು ಹಝ್ರತ್ ಪೈಗಂಬರ್(ಸ)ರ ಡೇರೆಯ ಸಮೀಪವಿರುತ್ತಿದ್ದರು ಮತ್ತು ಯಾವಾಗಲೂ ಅದರ ಸಂರಕ್ಷಣೆ ಮಾಡುತ್ತಿದ್ದರು.

ಮುಂದಿನದ್ದು ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅ(ರ)ರ ಪ್ರಸ್ತಾಪವಾಗಿದೆ. ಹಿಜರೀ 30ರಲ್ಲಿ 65ನೇ ವಯಸ್ಸಿನಲ್ಲಿ, ಮದೀನದಲ್ಲಿ ಅವರ ನಿಧನವಾಗಿತ್ತು. ಹಝ್ರತ್ ಉಸ್ಮಾನ್(ರ) ಅವರ ಜನಾಝಾ ನಮಾಝನ್ನು ನಿರ್ವಹಿಸಿದರು. ಯಾಖೂಬ್ ಬಿನ್ ಉತ್ಬರಿಂದ ಹೀಗೆ ವರದಿಯಾಗಿದೆ: ಹಾತಿಬ್ ಬಿನ್ ಅಬೀ ಬಲ್‌ತಅ(ರ) ತನ್ನ ನಿಧನದ ವೇಳೆ ನಾಲ್ಕು ಸಾವಿರ ದೀನಾರ್ ಮತ್ತು ದಿರ್ಹಮ್ ಬಿಟ್ಟು ಹೋದರು. ಒಂದು ಬಾರಿ ಅವರ ಒಬ್ಬ ಗುಲಾಮ ಅವರ ಕುರಿತು ಹಝ್ರತ್ ಪೈಗಂಬರ್(ಸ)ರ ಬಳಿಗೆ ದೂರು ನೀಡಲು ಬಂದರು ಮತ್ತು ಹೀಗೆ ಹೇಳಿದರು: ಹಾತಿಬ್ ಖಂಡಿತ ನರಕಕ್ಕೆ ಪ್ರವೇಶಿಸುವನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಸುಳ್ಳು ಹೇಳುತ್ತಿದ್ದೀಯ. ಅವರು ಖಂಡಿತ ನರಕಕ್ಕೆ ಪ್ರವೇಶಿಸಲಾರರು. ಏಕೆಂದರೆ ಅವರು ಬದ್ರ್ ಯುದ್ಧದಲ್ಲಿ ಮತ್ತು ಹುದೈಬಿಯ ಸಂಧಿಯ ವೇಳೆ ಇದ್ದರು.

ಇನ್ನೂ ಕೆಲವು ಬದ್ರೀ ಸಹಾಬರ ಪ್ರಸ್ತಾಪ ಉಳಿದಿದೆ. ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು – ಇನ್‌ಶಾ ಅಲ್ಲಾಹ್.

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُبِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ۔


***Friday Sermon delivered by Hadrath Khaleefatul Masih Al Khamis(atba)***
*At, **'Masjid Mubarak'**, Islamabad, Tilford, UK, on 27-01-2023*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon